ಬಲಿಯಾದವರು ಮಾತ್ರ ಇದ್ದೂ ಸತ್ತಂತೆ ಬದುಕಿರುತ್ತಾರೆ. ಧಾರ್ಮಿಕ ಸ್ಥಳಗಳಲ್ಲಿ ನಡೆದಿರಬಹುದಾದ ಲೈಂಗಿಕ ಶೋಷಣೆಯ ಖಟ್ಲೆಗಳು ಸಾಕಷ್ಟು ದಾಖಲಾಗಿದ್ದರೂ ಎಲ್ಲವೂ ಆಮೆ ವೇಗದಲ್ಲಿ ಸೊರಗುತ್ತಿವೆ. ವರದಿಯಾಗದಿರುವ ಇನ್ನೆಷ್ಟು ಪ್ರಕರಣಗಳು ಇರಬಹುದು ಎನ್ನುವುದನ್ನು ತಿಳಿಯಲು ಧಾರ್ಮಿಕ ಸ್ಥಳಗಳ ಸುತ್ತಲಿನ ಜನರ ಬಾಯಲ್ಲಿ ಹರಿದಾಡುತ್ತಿರುವ ಗಾಸಿಪ್‌ಗಳಿಗೆ ಕಿವಿಗೊಡಬೇಕಾಗುತ್ತದೆ.

6. ನಾವೆಲ್ಲರೂ ಜಾಗತೀಕರಣವನ್ನು ಅನಿವಾರ್ಯವಾಗಿ ಒಪ್ಪಿಕೊಂಡಿದ್ದೇವೆ. ಮಕ್ಕಳ ಕೈಯಲ್ಲಿರುವ ಮೊಬೈಲ್‌ಗಳಲ್ಲಿ ಅಂತರ್ಜಾಲ ಮುಕ್ತವಾಗಿ ಹರಿದಾಡುತ್ತಿದೆ. ಇವತ್ತು ಬ್ಲೂವೇಲ್‌ನಂತಹ ಆಟ ದೊಡ್ಡ ಕೋಲಾಹಲವನ್ನು ಎಬ್ಬಿಸಿದೆ. ಆದರೆ ನೀಲಿಚಿತ್ರಗಳು ಹಳ್ಳಿಯ ಮೂಲೆಮೂಲೆಯಲ್ಲಿ ಹದಿವಯಸ್ಸಿನವರ ದಾರಿ ತಪ್ಪಿಸುತ್ತಿವೆ ಎನ್ನುವುದನ್ನು ಅಷ್ಟಾಗಿ ಯಾರೂ ಗಮನಿಸುತ್ತಿಲ್ಲ. ರೈಲ್ವೆ ಪ್ಲಾಟ್‌ಫಾರ್ಮ್‌ಗಳಲ್ಲಿ ಉಚಿತವಾಗಿ ದೊರೆಯುವ ಅಂತರ್ಜಾಲದ ಬಳಕೆ ಹೆಚ್ಚಾಗಿ ಆಗುತ್ತಿರುವುದು ನೀಲಿಚಿತ್ರಗಳನ್ನು ನೋಡುವುದಕ್ಕಾಗಿ ಎನ್ನುವುದನ್ನು ಒಪ್ಪಿಕೊಳ್ಳಲಾಗಿದೆ. ಅಂತರ್ಜಾಲವನ್ನು ನಿರ್ಬಂಧಿಸುವುದು ಅಸಾಧ್ಯ ಎಂದಾದರೆ ನಮ್ಮ ಮಕ್ಕಳನ್ನು ಅಂತಹ ಮುಕ್ತ ವ್ಯವಸ್ಥೆಯಲ್ಲಿ ಬದುಕಲು ನಾವು ತಯಾರು ಮಾಡುತ್ತಿದ್ದೇವೆಯೇ?

### ಏನಿದರ ಸಂಬಂಧ?

ಮೇಲೆ ಹೇಳಿರುವ ಅಂಶಗಳು ಒಂದೊಕ್ಕೊಂದು ಸಂಬಂಧವಿಲ್ಲದ್ದು ಎಂದು ಮೇಲುನೋಟಕ್ಕೆ ಅನ್ನಿಸಿರಬಹುದು.  ಸಾಮಾಜಿಕ, ಧಾರ್ಮಿಕ, ಕಾನೂನಿಗೆ ಸಂಬಂಧಿಸಿದ ಅಥವಾ ಆಡಳಿತಾತ್ಮಕ–– ಹೀಗೆ ಭಿನ್ನ ಭಿನ್ನ ಅಂಶಗಳು ಪ್ರಾಧಾನ್ಯವಾಗಿವೆ ಎಂದು ಕಾಣಿಸಬಹುದಾದ ಘಟನೆಗಳು ಇವು. ಆದರೆ ಇವೆಲ್ಲದರ ಹಿಂದೆ ಲೈಂಗಿಕತೆಯ ಬಗೆಗಿನ ಅಜ್ಞಾನ, ತಪ್ಪು ತಿಳಿವಳಿಕೆ, ಮುಜುಗರ, ಹಿಂಜರಿಕೆಗಳ ಸಾಮಾನ್ಯ ಎಳೆಯೊಂದು ಇದೆ ಎನ್ನುವುದಕ್ಕಾಗಿ ಈ ಎಲ್ಲಾ ಅಂಶಗಳನ್ನು ಇಲ್ಲಿ ಪಟ್ಟಿ ಮಾಡಿದ್ದೇನೆ.

ಹೀಗೆ ಲೈಂಗಿಕತೆಯ ಬಗೆಗೆ ಕೆಲವು ಪ್ರಶ್ನೆಗಳನ್ನು ಎತ್ತಿದ ಕೂಡಲೆ ಅಥವಾ ಸಾರ್ವಜನಿಕವಾಗಿ ಲೈಂಗಿಕತೆಯ ಬಗೆಗೆ ಮಾತನಾಡಲು ಪ್ರಯತ್ನಿಸಿದ ಕೂಡಲೆ ಧರ್ಮ– ಸಂಸ್ಕೃತಿಯ ಹೆಸರಿನಲ್ಲಿ ಸಾಕಷ್ಟು ಜನ ಸಿಡಿದೇಳುತ್ತಾರೆ.  ಕೆಲವೊಂದು ವಿಚಾರಗಳಲ್ಲಿ ಅಂಥವರ ನಂಬಿಕೆಗಳು ತಪ್ಪು. ಅವರ ಭಯ– ಸಂಶಯಗಳು ಸಕಾರಣವಾಗಿರಬಹುದು. ಈ ಬರಹದಲ್ಲಿ ಮುಕ್ತ ಲೈಂಗಿಕತೆಯನ್ನು ಪ್ರತಿಪಾದಿಸುತ್ತಿಲ್ಲ. ಆದರೆ ನಾವು ಒಪ್ಪಿಕೊಂಡಿರುವ ಸಾಂವಿಧಾನಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಚೌಕಟ್ಟಿನ ಒಳಗಾದರೂ ಲೈಂಗಿಕತೆಯ ಬಗೆಗೆ ಆರೋಗ್ಯಪೂರ್ಣವಾದ ವಾತಾವರಣ ನಮ್ಮಲ್ಲಿ ಇದೆಯೇ? ಮುಂದಿನ ತಲೆಮಾರಿಗೆ ನಾವು ಒಂದು ಸಹನಶೀಲವಾದ ಮತ್ತು ಸಂತೋಷಕರವಾದ ಮಾದರಿಯನ್ನು ಬಿಟ್ಟುಹೋಗುತ್ತೇವೆ?

ಅಗತ್ಯವಾಗಿ ಹೇಳಲೇಬೇಕಾದ ಇನ್ನೊಂದು ಅಂಶವೆಂದರೆ ಮೇಲಿನ ಎಲ್ಲಾ ಸಮಸ್ಯೆಗಳು ನಮ್ಮ ದೇಶಕ್ಕೆ ಮಾತ್ರ ಸೀಮಿತವಾದದ್ದಲ್ಲ. ಸಾಕಷ್ಟು ಪಾಶ್ಚಿಮಾತ್ಯ ದೇಶಗಳಲ್ಲಿ, ಕೊರಿಯಾ, ಜಪಾನ್‌ನಂತಹ ಏಷ್ಯಾದ ದೇಶಗಳಲ್ಲಿಯೂ ಇವೆಲ್ಲದರ ಬಗೆಗೆ ನಿರಂತರವಾಗಿ ಚರ್ಚೆಗಳು ನಡೆಯುತ್ತಲೇ ಇವೆ.




